30)	Devappa Naika	Arooru
31)	Somappa Naika	"
32)	Shiva Naika	"
33)	Devappa Naika	"
34)	U. Raju	"
35)	Subba Naika	"
36)	Jagadeesha Naika	Anjaru Grama

ANNEXURE - III

Land Available For Grant In Udupi Taluk

1)	Perdur Grama	14-58
2)	38 Kalathur	8-50
3)	Hosur	5-00
4)	Haluvalli Grama	5-50
5)	Aroor Grama	6-78
6)	41. Shioor	4-40
7)	Neelavara	10-00
8)	Nalkur	4-00
9)	108 Kalathur	0-48
10)	Adladi	2-15
11)	Nadur	2-00
12)	Harebet	2-60
13)	Alehooru	4-50
14)	Pernkila	3-99
	Total	**74-48**

ಕೃಷಿ ಸಹಾಯಕರನ್ನು ನೇಮಿಸುವಾಗ ಅನುಸರಿಸುವ ನೀತಿ.

1308 - ಪಿ. ಬಸವರಾಜ್ (ಬ್ರಹ್ಮಾವರ್): ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಸಹಾಯಕರನ್ನು ತಾಲ್ಲೂಕುಗಳಿಗೆ ನೇಮಿಸುವಾಗ ಅನುಸರಿಸುವ ನೀತಿ ನಿಯಮಗಳೇನು?

ಆ) ಉಡುಪಿ ತಾಲ್ಲೂಕಿನಲ್ಲಿ ಕೃಷಿಸಹಾಯಕರ ಕೊರತೆ ಇದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಎಷ್ಟು ಕೃಷಿ ಸಹಾಯಕರು ಈಗ ಕಾರ್ಯ ನಿರ್ವಹಿಸುತ್ತಿದ್ದಾರೆ?

ಈ) ಅವಶ್ಯಕತೆಗೆ ಅನುಗುಣವಾಗಿ ಕೃಷಿ ಸಹಾಯಕರನ್ನು ನೇಮಿಸಲಾಗುವುದೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು): ಅ) ಅವಶ್ಯಕತೆಗೆ ಅನುಗುಣವಾಗಿ ಇಲಾಖಾ ನೇಮಕಾತಿ ಸಮಿತಿಯಿಂದ ಕೃಷಿ ಸಹಾಯಕರ ಖಾಲಿ ಹುದ್ದೆಗಳಿಗೆ ಆಯ್ಕೆಗೊಂಡ ಅಭ್ಯರ್ಥಿಗಳನ್ನು ಸಂಬಂಧ ಪಟ್ಟ

ಗ್ರಾಮೀಣ ಅಭಿವೃದ್ಧಿ ತರಬೇತಿ ಕೇಂದ್ರಗಳಲ್ಲಿ ಮೊದಲನೇ ವರ್ಷದ ಸೇವಾ ಪೂರ್ವ ಕೃಷಿ ಸಹಾಯಕರ ಸಂಸ್ಥಾ ತರಬೇತಿಯನ್ನು ಮತ್ತು ಕೃಷಿ ಸಹಾಯಕರ ವೃತ್ತಗಳಲ್ಲಿ ಎರಡನೇ ವರ್ಷದ ಸೇವಾ ಪೂರ್ವ ಕೃಷಿ ಸಹಾಯಕರ ವೃತ್ತಿ ತರಬೇತಿಯನ್ನು ಯಶಸ್ವಿಯಾಗಿ ಪಡೆದ ವೃತ್ತಿ ತರಬೇತಿಯಿಂದ ಬಿಡುಗಡೆ ಹೊಂದಿದ ತರಬೇತಿ ಅಭ್ಯರ್ಥಿಗಳನ್ನು ಕೃಷಿ ಸಹಾಯಕರ ಅರ್ಹ ವೇತನ ಶ್ರೇಣಿ ರೂ. 1040-1900 ಗಳಲ್ಲಿ 2 ವರ್ಷಗಳ ಪರಿವೀಕ್ಷಣಾ ಅವಧಿಯ ಮೇಲೆ ಕೃಷಿ ಸಹಾಯಕರನ್ನಾಗಿ ಆಯಾಯ ತಾಲ್ಲೂಕಿನ ಕೃಷಿ ವಿಸ್ತರಣಾ ಯೋಜನೆಯಲ್ಲಿ ಮತ್ತು ಕೃಷಿ ಸಹಾಯಕರಾಗಿ ಆಯ್ಕೆಗೊಂಡು 6ತಿಂಗಳ ಭೂಸಾರ ಸಂರಕ್ಷಣೆಯಲ್ಲಿ ತರಬೇತಿ ಹೊಂದಿದ ಅಭ್ಯರ್ಥಿಗಳನ್ನು ಭೂ ಸಾರ ಸಂರಕ್ಷಣೆ ಯೋಜನೆಯಲ್ಲಿ ಕೃಷಿ ಸಹಾಯಕರನ್ನಾಗಿ ನೇಮಿಸಲಾಗುವುದು.

ಆ) ಹೌದು.

ಇ) ಉಡುಪಿ ತಾಲ್ಲೂಕಿನಲ್ಲಿ ಕೃಷಿ ವಿಸ್ತರಣೆ ಯೋಜನೆಯಲ್ಲಿ 45 ಹಾಗೂ ಭೂಸಾರ ಸಂರಕ್ಷಣೆಯಲ್ಲಿ 6 ಮಂದಿ ಕೃಷಿ ಸಹಾಯಕರುಗಳು ಹಾಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ) ಹಾಲಿ ಜಾರಿಯಲ್ಲಿರುವ ಆರ್ಥಿಕ ಮಿತವ್ಯಯವನ್ನು ಸಡಿಲಿಸಿದ ನಂತರ ಕೃಷಿ ಸಹಾಯಕರನ್ನು ಅವಶ್ಯಕತೆಗೆ ಅನುಗುಣವಾಗಿ ನೇಮಕಾತಿ ಮಾಡಿಕೊಳ್ಳಲಾಗುವುದು.

ಹೊಗೆಸೊಪ್ಪು ಬೆಳೆಗಾರರಿಗೆ ರಾಸಾಯನಿಕ ಗೊಬ್ಬರವನ್ನು ಸಕಾಲದಲ್ಲಿ ಸರಬರಾಜು ಮಾಡುವುದು.

1257 - ಶ್ರೀ ಎ. ಟಿ. ರಾಮಸ್ವಾಮಿ. (ಅರಕಲಗೂಡು) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1990-91ನೇ ಸಾಲಿನಲ್ಲಿ ವರ್ಜೀನಿಯಾ ಹೊಗೆಸೊಪ್ಪು ಬೆಳೆಗಾರರಿಗೆ ಸಕಾಲದಲ್ಲಿ ರಾಸಾಯನಿಕ ಗೊಬ್ಬರಗಳು ಸರಬರಾಜಾಗದೆ ರೈತರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, 1991-92ನೇ ಸಾಲಿನಲ್ಲಿ ಸಕಾಲದಲ್ಲಿ ಸಮರ್ಪಕವಾಗಿ ವಿತರಿಸಲು ಸರ್ಕಾರ ಏನೇನು ಕ್ರಮ ಕೈಗೊಂಡಿರುತ್ತದೆ?*

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) ಹೌದು.

ಆ) ವರ್ಜಿನೀಯಾ ಹೊಗೆಸೊಪ್ಪಿಗೆ ಮುಖ್ಯವಾಗಿ ಬೇಕಾಗುವ ರಾಸಾಯನಿಕ ಗೊಬ್ಬರಗಳೆಂದರೆ, ಸಲ್ಫೇಟ್ ಆಫ್ ಪೊಟ್ಯಾಷ್ ಮತ್ತು ಸಿಎಎನ್: 1991-92ನೇ ಸಾಲಿಗೆ ವರ್ಜೀನಿಯಾ ಹೊಗೆಸೊಪ್ಪು ಬೆಳೆಗಾರರಿಗೆ ಬೇಕಾಗುವ ಸಲ್ಫೇಟ್ ಆಫ್ ಪೊಟ್ಯಾಷ್ ಗೊಬ್ಬರವನ್ನು ಸರಬರಾಜು ಮಾಡಲು ಅನಿವಾರ್ಯ ಕಾರಣಗಳಿಂದ ಸ್ವಲ್ಪ ವಿಳಂಬವಾದರೂ ಸಹ ಈಗಾಗಲೇ ಆಯಾಯ ಜಿಲ್ಲೆಗಳಲ್ಲಿ ದಾಸ್ತಾನು ಮಾಡಲಾಗಿದ್ದು ಅದನ್ನು ಸಕಾಲದಲ್ಲಿ ರೈತರಿಗೆ ಸರಬರಾಜು ಮಾಡಲಾಗುವುದು ಮತ್ತು ಈ ತಿಂಗಳು ರಾಜ್ಯಕ್ಕೆ ಸುಮಾರು 3000 ರಿಂದ 4000 ಟನ್ ಸಿಎಎನ್ ರಸಗೊಬ್ಬರ ಬರಲಿದ್ದು ಅದನ್ನು ಹೊಗೆಸೊಪ್ಪು ಬೆಳೆಗಾರರಿಗೆ ಒದಗಿಸಲಾಗುವುದು.

ಮೂಡಬಿದ್ರೆಯಲ್ಲಿ ಮಾದರಿ ತೋಟಗಾರಿಕೆಗೆ ಕಾದಿರಿಸಿರುವ ಸ್ಥಳ

1258 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೂಡಬಿದ್ರೆಯಲ್ಲಿ ಮಾದರಿ ತೋಟಗಾರಿಕೆಯ ಬಗ್ಗೆ ಸರ್ಕಾರವು ಎಷ್ಟು ಸ್ಥಳವನ್ನು ಕಾದಿರಿಸಿದೆ?*